# ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.

## ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 4 (1) (ಎ)ಪ್ರಕಾರ ಸ್ವಯಂ ಘೋಷಣೆ

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಾರ್ಯ ನಿರ್ವಹಣೆಯಲ್ಲಿ ಈ ಕೆಳಗಿನಂತೆ ದಾಖಲೆ, ದಸ್ತಾವೇಜು ಕಾಯ್ದಿಡಲಾಗಿರುತ್ತದೆ.

ಪ್ರಾಧಿಕಾರದ ಸಭೆ ನಡುವಳಿಕೆಗಳ ಮಸ್ತಕ, ನಿವೇಶನಗಳ ಹಂಚಿಕೆ ರಿಜಿಸ್ಟರ್, ಪ್ರಾಧಿಕಾರದ ಯೋಜನೆಗಳಿಗೆ ಭೂಸ್ವಾಧೀನಪಡಿಸಿಕೊಂಡ ಜಮೀನುಗಳ ಸಂಬಂಧ ಪರಿಹಾರಧನ ವಿತರಿಸಿದ ರಿಜಿಸ್ಟರ್ ಹಾಗೂ ಕಡತಗಳು, ಪ್ರಾಧಿಕಾರ ಯೋಜಿಸಿದ ಬಡಾವಣೆ, ಯೋಜನೆಗಳ ಮಂಜೂರಾತಿ ಕಡತಗಳು, ಕಾಮಗಾರಿ ಟೆಂಡರ್ ದಾಖಲೆಗಳು, ಎಮ್.ಬಿ. ಗಳು, ತಾಂತ್ರಿಕ ಮಂಜೂರಾತಿ ರಿಜಿಸ್ಟರ್, ಆಡಳಿತಾತ್ಮಕ ಮಂಜೂರಾತಿ ರಿಜಿಸ್ಟರ್, ಕಾಮಗಾರಿ ವಹಿಸಿದ ಒಪ್ಪಂದ ವಹಿ, ಯೋಜನಾವಾರು ವೆಚ್ಚದ ರಿಜಿಸ್ಟರ್, ವಿನ್ಯಾಸಗಳ ಅನುಮೋದನೆ ಕಡತಗಳು ಹಾಗೂ ರಿಜಿಸ್ಟರ್, ಜನರಲ್ ಕ್ಯಾಶ್ ಬುಕ್, ವರ್ಗೀಕೃತ ಆದಾಯ ಮತ್ತು ವೆಚ್ಚದ ರಿಜಿಸ್ಟರ್, ಠೇವಣಿ ರಿಜಿಸ್ಟರ್, ಬ್ಯಾಂಕ್ ಬ್ಯಾಲೆನ್ಸ್ ಪಾಸ್ ಬುಕ್, ಇ.ಎಂ.ಡಿ/ಎಸ್.ಡಿ. ರಿಫಂಡ್ ರಿಜಿಸ್ಟರ್, ಆದಾಯ ತೆರಿಗೆ/ರಾಜಸ್ವಧನ ರಿಜಿಸ್ಟರ್, ವೇತನ ಕಡಿತಗಳನ್ನು ಬ್ಯಾಂಕ್‌ಗೆ ಭರಣಾ ಮಾಡುವ ರಿಜಿಸ್ಟರ್, ಸಿಬ್ಬಂದಿಗಳಿಗೆ ಸಂಬಂಧಿಸಿದ ರಿಜಿಸ್ಟರ್‌ಗಳು, ವಾರ್ಷಿಕ ಲೆಕ್ಕ ತಪಾಸಣಾ ವರದಿಗಳು, ಲೇಖನ ಮತ್ತು ಪೀಠೋಪಕರಣಗಳ ವಹಿ, ಗ್ರಂಥಾಲಯ ವಹಿ.

# ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.

## ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 4 (1) (ಬಿ) ಪ್ರಕಾರ ಸ್ವಯಂ ಘೋಷಣೆ

### 4 (1) (ಬಿ) (i) ಸಂಸ್ಥೆಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳು:

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರಡಿ ಸರ್ಕಾರದ ಅಧಿಸೂಚನೆ ಹೆಚ್.ಯುಡಿ/849/ಟಿಟಿಪಿ/87 ದಿನಾಂಕ: 22.12.1987 ರಲ್ಲಿ " ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ " ರಚನೆಯಾಗಿರುತ್ತದೆ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರವು ಸ್ಥಳೀಯ ಯೋಜನಾ ಪ್ರದೇಶದ ವ್ಯವಸ್ಥಿತವಾದ ಹಾಗೂ ಯೋಜನಾಬದ್ಧ ಬೆಳವಣಿಗೆ/ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತಗೊಳಿಸುವುದು. ಅದರಂತೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಅದಕ್ಕೆ ಸರ್ಕಾರದ ಅನುಮೋದನೆ ಪಡೆಯುವುದು.

ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಂಡು ವಸತಿ ಬಡಾವಣೆಗಳನ್ನು ರಚಿಸಿ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ನಿಯಮಾನುಸಾರ ವಿತರಣೆ ಮಾಡುವುದು ಹಾಗೂ ಬಡಾವಣೆಗಳಲ್ಲಿ ಕಾಯ್ದಿರಿಸಲಾದ ನಾಗರೀಕ ಸೌಲಭ್ಯದ ನಿವೇಶನಗಳನ್ನು ವಿತರಿಸುವುದು ಹಾಗೂ ಈ ಬಡಾವಣೆಗಳಲ್ಲಿನ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವುದು.

ಬಡಾವಣೆ ಯೋಜನೆಗಳಿಗೆ ಅನುಮೋದನೆ ನೀಡುವುದು ಹಾಗೂ ಕಟ್ಟಡ ನಿರ್ಮಿಸಲು ಕಟ್ಟಡ ಪರವಾನಿಗೆ ನೀಡುವುದು.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರಡಿ ನಿಗದಿಪಡಿಸಲಾದ ಕಾರ್ಯಗಳನ್ನು ನಿರ್ವಹಿಸುವುದು. ಹಾಗೂ ಸರ್ಕಾರದಿಂದ ಕಾಲಾನುಕಾಲಕ್ಕೆ ಗೊತ್ತುಪಡಿಸಲಾದ ಕಾರ್ಯ ಸೂಚಿಗಳನ್ನು ನಿರ್ವಹಿಸುವುದು.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯಲಯದಲ್ಲಿ ಈ ಕೆಳಗಿನ ಶಾಖೆಗಳು ಕಾರ್ಯ ನಿರ್ವಹಿಸುತ್ತವೆ.

. ಯೋಜನಾ ಶಾಖೆ
. ಲೋಕೋಪಯೋಗಿ ಶಾಖೆ
. ಭೂಸ್ವಾಧೀನ ಶಾಖೆ
. ಲೆಕ್ಕಪತ್ರ ಶಾಖೆ
. ನಿವೇಶನ ಹಂಚಿಕೆ ಹಾಗೂ ಆಡಳಿತ ಶಾಖೆ

ಈ ಮೇಲೆ ತಿಳಿಸಲಾದ ಶಾಖೆಗಳು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತವೆ.

. ಯೋಜನಾ ಶಾಖೆಯು ಮಹಾಯೋಜನೆಯನ್ನು ಸಿದ್ಧಪಡಿಸುವುದು. ಮತ್ತು ಪರಿಷ್ಕರಿಸುವ ಕಾರ್ಯ, ಬಡಾವಣೆ ರೂಪುರೇಷೆಗಳನ್ನು ಸಿದ್ಧಪಡಿಸುವುದು ಹಾಗೂ ಪ್ರಾಧಿಕಾರದ ಸಾಮಾನ್ಯ ಆಡಳಿತಕ್ಕೆ ಸಹಕರಿಸುವುದು.

. ಲೋಕೋಪಯೋಗಿ ಶಾಖೆಯು ಪ್ರಾಧಿಕಾರದ ವಿವಿಧ ವಸತಿ ಯೋಜನೆಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಯೋಜನೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು.

. ಭೂಸ್ವಾಧೀನ ಶಾಖೆಯು ಪ್ರಾಧಿಕಾರದ ವಸತಿ ಯೋಜನೆಗಳಿಗೆ ಅವಶ್ಯವಿರುವ ಜಮೀನುಗಳ ಭೂಸ್ವಾಧೀನತೆ ಪ್ರಕ್ರೀಯೆಗಳನ್ನು ಜರುಗಿಸುತ್ತದೆ.

. ಲೆಕ್ಕಪತ್ರ ಶಾಖೆಯು ಪ್ರಾಧಿಕಾರದ ಆದಾಯ, ವೆಚ್ಚ ಲೆಕ್ಕಪತ್ರಗಳನ್ನು ನೋಡಿಕೊಳ್ಳುವುದು.

. ನಿವೇಶನ ಹಂಚಿಕೆ ಹಾಗೂ ಆಡಳಿತ ಶಾಖೆಯು ಪ್ರಾಧಿಕಾರದ ವಸತಿ ಯೋಜನೆಗಳಲ್ಲಿನ ನಿವೇಶನಗಳ ಹಂಚಿಕೆಯನ್ನು ನಿಯಮಾವಳಿ ಪ್ರಕಾರ ವಿತರಿಸುವ ಕಾರ್ಯವನ್ನು ನಿರ್ವಹಿಸುವುದು. ಪ್ರಾಧಿಕಾರದ ಸಾಮಾನ್ಯ ಆಡಳಿತಾತ್ಮಕ ವಿಷಯಗಳ ನಿರ್ವಹಣೆ ಹಾಗೂ ಸಿಬ್ಬಂದಿಗಳ ಸೇವಾ ವಿವರಗಳನ್ನು ನಿರ್ವಹಿಸುವುದು.

## ii) ಅಧಿಕಾರಿ ಮತ್ತು ಸಿಬ್ಬಂದಿಯ ವಿವರಗಳು:

ಅನುಸೂಚಿ 1 ರಲ್ಲಿ ವಿವರ ನೀಡಿದೆ.

## iii) ಪ್ರತಿ ಅಧಿಕಾರಿ/ಸಿಬ್ಬಂದಿಯ ಅಧಿಕಾರ ಮತ್ತು ಕರ್ತವ್ಯಗಳು:

ಪ್ರಾಧಿಕಾರದ ಆಯುಕ್ತರು, ಮುಖ್ಯ ಕಾರ್ಯನಿರ್ವಾಹಕ ಮತ್ತು ಆಡಳಿತಾಧಿಕಾರಿಯಾಗಿರುತ್ತಾರೆ. ಇವರು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 13 ರಲ್ಲಿ ತಿಳಿಸಿರುವಂತೆ ಹಾಗೂ ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಾಯ್ದೆಯಡಿಯ ಪ್ರಕಾರ್ಯಗಳನ್ನು ಮತ್ತು ಸರ್ಕಾರವು ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಗಳಂತೆ ಅಧಿಕಾರಗಳನ್ನು ಚಲಾಯಿಸುತ್ತಾರೆ. ಮತ್ತು ಅಂತಹ ಇತರ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಆಯುಕ್ತರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಇವರಿಗೆ ಪ್ರಕಾರ್ಯಗಳನ್ನು ನಿರ್ವಹಿಸಲು ಸಹಾಯ ಮಾಡಲು ಈ ಕೆಳಗೆ ತೋರಿಸಿದ ಅಧಿಕಾರಿಗಳು ಹಾಗೂ ಸರ್ಕಾರದಿಂದ ಗೊತ್ತುಪಡಿಸಲಾದ ಕಾರ್ಯಸೂಚಿ ಪ್ರಕಾರ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

1) ನಗರ ಯೋಜಕ ಸದಸ್ಯರು
2) ಕಾರ್ಯ ನಿರ್ವಾಹಕ ಅಭಿಯಂತರು
3) ವಿಶೇಷ ಭೂಸ್ವಾಧೀನ ಅಧಿಕಾರಿಗಳು
4) ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರು

ಈ ಮೇಲ್ಕಾಣಿಸಿದ ಅಧಿಕಾರಿಗಳಿಗೆ ತಮ್ಮ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಕಾರ್ಯಾಲಯದಲ್ಲಿ ಸಹಾಯಕ ಅಭಿಯಂತರು, ನಗರ ಯೋಜಕರು, ಕಿರಿಯ ಅಭಿಯಂತರು, ಲೆಕ್ಕಾಧೀಕ್ಷಕರು, ಕಚೇರಿ ಅಧೀಕ್ಷಕರು, ಶಿರಸ್ತೇದಾರರು, ಪ್ರಥಮ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ಪ್ರಥಮ ದರ್ಜೆ ಭೂಮಾಪಕರು, ದ್ವಿತಿಯ ದರ್ಜೆ ಸಹಾಯಕರು, ಬೆರಳಚ್ಚುಗಾರರು, ಡಿ ದರ್ಜೆಯ ನೌಕರರು ಸಹಾಯ ಮಾಡುತ್ತಾರೆ.

## iv) ಪ್ರಕರಣಗಳಲ್ಲಿ ತೀರ್ಮಾನ ಕೈಕೊಳ್ಳುವಾಗ ಅನುಸರಿಸುವ ನೀತಿ ನಿಯಮಗಳು:

ಪ್ರಾಧಿಕಾರದಲ್ಲಿ ಪ್ರಕರಣಗಳಲ್ಲಿ ತೀರ್ಮಾನ ಕೈಕೊಳ್ಳುವಾಗ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987, ಪಿ.ಡಬ್ಲ್ಯೂ.ಡಿ ಕೋಡ್, ಕೆ.ಸಿ.ಎಸ್.ಆರ್, ಕೆ.ಎಫ್.ಸಿ. ಮತ್ತು ಪ್ರಾಧಿಕಾರದ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಸರ್ಕಾರದಿಂದ ರಚಿಸಲಾದ ನಿಯಮಗಳು ಅನೂಸೂಚಿಗಳು ಮತ್ತು ಆದೇಶಗಳನ್ನು ಬಳಸಿಕೊಂಡು ಆಡಳಿತವನ್ನು ನಿರ್ವಹಿಸಲಾಗುತ್ತದೆ.

## V) ಪ್ರಕಾರ್ಯಗಳನ್ನು ಅನುಷ್ಠಾನ ತರುವಲ್ಲಿ ನಿಗದಿಗೊಳಿಸಿದ ನಿಬಂಧನೆಗಳು, ಮಾರ್ಗಸೂಚಿಗಳು:

ಪ್ರಾಧಿಕಾರದಲ್ಲಿ ಪ್ರಕಾರ್ಯಗಳನ್ನು ಅನುಷ್ಠಾನ ತರುವಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987, ಪಿ.ಡಬ್ಲ್ಯೂ.ಡಿ ಕೋಡ್, ಕೆ.ಸಿ.ಎಸ್.ಆರ್, ಕೆ.ಎಫ್.ಸಿ. ಹಾಗೂ ಸರ್ಕಾರದಿಂದ ರಚಿಸಲಾದ ನಿಯಮಗಳನ್ನು ಅನುಸರಿಸಲಾಗುವುದು.

## vi) ಪ್ರಕಾರ್ಯಗಳನ್ನು ಕೈಕೊಳ್ಳಲು ಸಿಬ್ಬಂದಿಗೆ ಸಹಾಯಕವಾಗಿರುವ ನಿಯಮಾವಳಿಗಳು ವಿನಿಮಯಗಳು, ನಿಬಂಧನೆಗಳು, ದಸ್ತಾವೇಜುಗಳು:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987, ಪಿ.ಡಬ್ಲ್ಯೂ.ಡಿ ಕೋಡ್, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ನಿವೇಶನಗಳು ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮಾವಳಿಗಳು 1991, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಾವಳಿಗಳು 1991 ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಾವಳಿಗಳು ಹಾಗೂ ಕಾಲಕಾಲಕ್ಕೆ ಸರ್ಕಾರದಿಂದ ರಚಿಸಲಾದ ನಿಯಮಾವಳಿಗಳು, ತಿದ್ದುಪಡಿ, ವಿನಿಮಯಗಳು, ನಿಬಂಧನೆಗಳು ಮತ್ತು ಪ್ರಾಧಿಕಾರದ ಸಭೆ ನಡುವಳಿಕೆಗಳು ಪ್ರಕಾರ್ಯಗಳನ್ನು ಕೈಕೊಳ್ಳಲು ಸಿಬ್ಬಂದಿಗೆ ಸಹಾಯಕವಾಗಿರುವವು.

## vii) ಪ್ರಾಧಿಕಾರವು ಅಗತ್ಯವಾಗಿ ಸಂಗ್ರಹಿಸಿಟ್ಟುಕೊಳ್ಳಬೇಕಾದ ದಾಖಲೆಗಳು:

ಪ್ರಾಧಿಕಾರದ ಸಭೆ ನಡುವಳಿಕೆಗಳ ಪುಸ್ತಕ, ನಿವೇಶನಗಳ ಹಂಚಿಕೆ ರಿಜಿಸ್ಟರ್, ಪ್ರಾಧಿಕಾರದ ಯೋಜನೆಗಳಿಗೆ ಭೂಸ್ವಾಧೀನಪಡಿಸಿಕೊಂಡ ಜಮೀನುಗಳ ಸಂಬಂಧ ಪರಿಹಾರಧನ ವಿತರಿಸಿದ ರಿಜಿಸ್ಟರ್ ಹಾಗೂ ಕಡತಗಳು, ಪ್ರಾಧಿಕಾರ ಯೋಜಿಸಿದ ಬಡಾವಣೆ, ಯೋಜನೆಗಳ ಮಂಜೂರಾತಿ ಕಡತಗಳು, ಕಾಮಗಾರಿ ಟೆಂಡರ್ ದಾಖಲೆಗಳು, ಎಮ್.ಬಿ. ಗಳು, ತಾಂತ್ರಿಕ ಮಂಜೂರಾತಿ ರಿಜಿಸ್ಟರ್, ಆಡಳಿತಾತ್ಮಕ ಮಂಜೂರಾತಿ ರಿಜಿಸ್ಟರ್, ಕಾಮಗಾರಿ ವಹಿಸಿದ ಒಪ್ಪಂದ ವಹಿ, ಯೋಜನಾವಾರು ವೆಚ್ಚದ ರಿಜಿಸ್ಟರ್, ವಿನ್ಯಾಸಗಳ ಅನುಮೋದನೆ ಕಡತಗಳು ಹಾಗೂ ರಿಜಿಸ್ಟರ್, ಜನರಲ್ ಕ್ಯಾಶ್ ಬುಕ್, ವರ್ಗೀಕೃತ ಆದಾಯ ಮತ್ತು ವೆಚ್ಚದ ರಿಜಿಸ್ಟರ್, ಠೇವಣಿ ರಿಜಿಸ್ಟರ್, ಬ್ಯಾಂಕ್ ಬ್ಯಾಲೆನ್ಸ್ ಪಾಸ್ ಬುಕ್, ಇ.ಎಂ.ಡಿ/ಎಸ್.ಡಿ. ರಿಫಂಡ್ ರಿಜಿಸ್ಟರ್, ಆದಾಯ ತೆರಿಗೆ/ರಾಜಸ್ವಧನ ರಿಜಿಸ್ಟರ್, ವೇತನ ಕಡಿತಗಳನ್ನು ಬ್ಯಾಂಕ್‌ಗೆ ಭರಣಾ ಮಾಡುವ ರಿಜಿಸ್ಟರ್, ಸಿಬ್ಬಂದಿಗಳಿಗೆ ಸಂಬಂಧಿಸಿದ ರಿಜಿಸ್ಟರ್‌ಗಳು, ವಾರ್ಷಿಕ ಲೆಕ್ಕ ತಪಾಸಣಾ ವರದಿಗಳು, ಲೇಖನ ಮತ್ತು ಪೀಠೋಪಕರಣಗಳ ವಹಿ, ಗ್ರಂಥಾಲಯ ವಹಿ.

## viii) ಪ್ರಾಧಿಕಾರವು ತನ್ನ ನೀತಿ ನಿಯಮ ಅಥವಾ ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಲಹೆ ಸೂಚನೆ ಪಡೆಯುವ ಅಥವಾ ಸಮಾಲೋಚನೆ ವ್ಯವಸ್ಥೆ ಮಾಡುವ ಪರಿಣಿತರ ತಂಡದ ಸೇವೆ ಪಡೆಯುತ್ತಿದ್ದರೆ ಅದರ ವಿವರ:

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರವು ಯಾವುದೇ ಪರಿಣಿತರ ತಂಡದ ಸೇವೆ ಪಡೆಯುತ್ತಿಲ್ಲ.

## ix) ಪ್ರಾಧಿಕಾರದ ಸಮಿತಿ:

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಕಲಂ 3(3) ರಲ್ಲಿ ಅಳವಡಿಸಿರುವಂತೆ ಪ್ರಾಧಿಕಾರದ ಸಭೆಗಳನ್ನು ನಡೆಸಲು ಸದಸ್ಯರುಗಳ ಸಮಿತಿ ಇರುವುದು. ಸದರಿ ಸಮಿತಿಯು ಕಾಲಾನುಕಾಲಕ್ಕೆ ಸಭೆ ಸೇರಿ ತೀರ್ಮಾನಗಳನ್ನು ಅಂಗೀಕರಿಸಿದ ಮೇರೆಗೆ ಅವುಗಳನ್ನು ಅನುಷ್ಠಾನಕ್ಕೆ ತರಲಾಗುವುದು. ಈ ಸಭೆಗಳು ಸದಸ್ಯರುಗಳು ನಡೆಸುತ್ತಿದ್ದು ಸಾರ್ವಜನಿಕರಿಗೆ ಮುಕ್ತವಾಗಿರುವುದಿಲ್ಲ. ಆದರೆ ಈ ಸಭೆಗಳ ನಡುವಳಿಕೆಗಳನ್ನು ಸಾರ್ವಜನಿಕರಿಗೆ ನೀಡಲು ಅವಕಾಶವಿದೆ. ಸಾರ್ವಜನಿಕರು ಈ ಬಗ್ಗೆ ಕೋರಿಕೆ ಸಲ್ಲಿಸಿದಲ್ಲಿ ನಡುವಳಿಗಳನ್ನು ನೀಡಲು ಅಗತ್ಯ ಕ್ರಮ ಕೈಕೊಳ್ಳಲಾಗುವುದು. ಪ್ರಾದಿಕಾರದ ಸಮಿತಿಯಲ್ಲಿ ನಿರ್ಣಯ ಕೈಕೊಂಡು ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಉಪಸಮಿತಿಯನ್ನು ರಚಿಸಲು ಅವಕಾಶವಿರುತ್ತದೆ. ಉಪಸಮಿತಿಯು ನೀಡುವ ವರದಿಯ ಮೇಲೆ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು.

x) ಪ್ರಾಧಿಕಾರದ ಪ್ರತಿ ಅಧಿಕಾರಿ/ಸಿಬ್ಬಂದಿ ಪ್ರತಿ ತಿಂಗಳು ಅಧಿಕಾರಯುತವಾಗಿ ಸ್ವೀಕರಿಸುವ ಒಟ್ಟು ಸಂಬಳದ ವಿವರ:

ಸದರಿ ವಿವರ ಅನೂಸೂಚಿ 2 ರಲ್ಲಿ ನೀಡಿದೆ.

xi) ಪ್ರಾಧಿಕಾರದ ಪ್ರತಿಯೊಂದು ಯೋಜನಾವಾರು ನಿಗದಿಗೊಳಿಸಿದ ಅನುದಾನದ ವಿವರಗಳು:

ಅನೂಸೂಚಿ 3 ರಲ್ಲಿ ವಿವರವಾದ ಪಟ್ಟಿ ಲಗತ್ತಿಸಿದೆ.

xii) ಸಹಾಯಧನ ನೀಡುವ ಯೋಜನೆಗಳ ಅನುಷ್ಠಾನದಲ್ಲಿ ಅನುಸರಿಸುವ ರೀತಿ ನೀತಿಗಳು :

ಪ್ರಾಧಿಕಾರವು ಯಾವುದೇ ಸಹಾಯಧನ ನೀಡುವ ಅವಕಾಶವಿರುವುದಿಲ್ಲ.

xiii) ಪ್ರಾಧಿಕಾರದಿಂದ ಸವಲತ್ತು ಪಡೆಯುವವರ ವಿವರಗಳು:

ಯುದ್ಧದಲ್ಲಿ/ಯುದ್ಧದಂತಹ ಕಾರ್ಯಾಚರಣೆಗಳಲ್ಲಿ ಮಡಿದ ಯೋಧರ ಅವಲಂಭಿತರಿಗೆ ಉಚಿತವಾಗಿ ನಿವೇಶನ ನೀಡಲು ಸರ್ಕಾರದ ಆದೇಶ ಸಂಖ್ಯೆ ನಅಇ/178/ಬೆಂರುಪ್ರಾ/2003, ದಿನಾಂಕ: 19.08.2003 ರಡಿ ಅವಕಾಶ ಕಲ್ಪಿಸಿದೆ.

xiv) ವಿದ್ಯುನ್ಮಾನ ಮಾಧ್ಯಮದಲ್ಲಿ ಅಳವಡಿಸಿದ ಅಥವಾ ಲಭ್ಯವಿರುವ ಮಾಹಿತಿಯ ವಿವರಗಳು:

ಪ್ರಾಧಿಕಾರಕ್ಕೆ ಆಡಳಿತಕ್ಕೆ ಸಂಬಂಧಿಸಿರುವ ಎಲ್ಲಾ ದಾಖಲಾತಿಗಳನ್ನು ವಿದ್ಯುನ್ಮಾನ ರೂಪಕ್ಕೆ ತರಲಾಗುತ್ತಿದ್ದು ಲಭ್ಯವಿರುವ ದಾಖಲಾತಿಗಳನ್ನು ಒದಗಿಸಲು ಕಾರ್ಯತತ್ಪರರಾಗಿರುತ್ತದೆ. ಪ್ರಾಧಿಕಾರವು ಒಂದು ವೆಬ್‌ಸೈಟ್ ಹೊಂದಿದ್ದು ಅದರಲ್ಲಿ ಲಭ್ಯವಿರುವ ಮಾಹಿತಿಗಳನ್ನು ಅಳವಡಿಸಲಾಗಿದೆ. www .belgaumuda.org

xv) ಪ್ರಾಧಿಕಾರದ ಪೂರಕ ಮಾಹಿತಿ ಪಡೆಯುವುದಕ್ಕಾಗಿರುವ ಗ್ರಂಥಾಲಯ:

ಪ್ರಾಧಿಕಾರದಲ್ಲಿ ಆಡಳಿತಕ್ಕೆ ಸಂಬಂಧಿಸಿದಂತೆ ಅಧಿನಿಯಮಗಳು/ಕಾನೂನು ಪುಸ್ತಕಗಳು ಹಾಗೂ ವಿವಿಧ ಪುಸ್ತಕಗಳ ಒಂದು ಗ್ರಂಥಾಲಯವಿದ್ದು, ಅದು ಕಾರ್ಯಾಲಯದ ಅಧಿಕಾರಿ/ಸಿಬ್ಬಂದಿಗಳ ಉಪಯೋಗಕ್ಕಾಗಿ ಮಾತ್ರ ಸೀಮಿತಗೊಂಡಿರುತ್ತವೆ.

xvi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳು:

ಅನೂಸೂಚಿ 4 ರಲ್ಲಿ ವಿವರವಾದ ಪಟ್ಟಿ ಲಗತ್ತಿಸಿದೆ.

xvii) ಪ್ರಕಟಣೆಗಳು, ನಿಯತಕಾಲಿಕಗಳು ಮತ್ತು ಇತರೇ ಮಾಹಿತಿಯನ್ನು ಪ್ರತಿ ವರ್ಷ ಕಾಲೋಚಿತಗೊಳಿಸಿ ಪ್ರಕಟಿಸುವುದು.

ಪ್ರಾಧಿಕಾರದ ಆಡಳಿತ ವರದಿ ಪ್ರತಿ ವರ್ಷ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ.

# ಅನುಸೂಚಿ–1

## ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಪಡೆಯುವ ತಿಂಗಳ ವೇತನ.

| ಕ್ರ. ಸಂ. | ಅಧಿಕಾರಿ/ಸಿಬ್ಬಂದಿಗಳ ಹೆಸರು | ಹುದ್ದೆ | ದೂರವಾಣಿ ಸಂಖ್ಯೆ. |
|---|---|---|---|
| 1 | 2 | 3 | 4 |
| 1 | ಡಾ. ವಿ. ಎಸ್. ಚೌಗುಲಾ | ಆಯುಕ್ತರು | 0831 –2470342 |
| 2 | ಶ್ರೀ. ಎ.ಎಸ್. ಕಾಂಬಳೆ | ನಗರ ಯೋಜಕ ಸದಸ್ಯರು | 0831– 2470257 |
| 3 | ಶ್ರೀ ಐ.ಎಂ. ಶೇಡಬಾಳ್ಕರ | ಕಾರ್ಯಕಾರಿ ಅಭಿಯಂತರು | 0831 –2473107 |
| 4 | ಶ್ರೀ ಜೆ. ಎಂ. ದೇಶಪಾಂಡೆ | ಸಹಾಯಕ ಕಾರ್ಯಕಾರಿ ಅಭಿಯಂತರು | 0831– 2470257 |
| 5 | ಶ್ರೀ ಐ. ಸಿ. ಕಂಠಿ | ಕಚೇರಿ ವ್ಯವಸ್ಥಾಪಕ | 0831– 2470257 |
| 6 | ಶ್ರೀ. ಎಸ್.ಕೆ. ಲೋಕರೆ | ಉಪ ತಹಶೀಲದಾರ | 0831– 2470257 |
| 7 | ಶ್ರೀ. ಡಿ. ವೈ. ತಳವಾರ | ಲೆಕ್ಕ ಅಧೀಕ್ಷಕ | 0831– 2470257 |
| 8 | -- | ಸಹಾಯಕ ಅಭಿಯಂತರು | 0831– 2470257 |
| 9 | ಶ್ರೀ. ಟಿ.ಎಚ್. ದೇವರಮನಿ | ಪ್ರ.ದ.ಸ. | 0831– 2470257 |
| 10 | ಶ್ರೀ. ಜಿ. ಐ. ಮುಜಾವರ | ಪ್ರ.ದ.ಸ. | 0831– 2470257 |
| 11 | ಶ್ರೀ. ಎಸ್. ಎಸ್. ಕಣಬರ್ಗಿ | ಪ್ರ.ದ.ಸ. | 0831– 2470257 |
| 12 | ಶ್ರೀ. ಎನ್. ಐ. ತಳವಾರ | ಪ್ರ.ದ.ಸ. | 0831– 2470257 |
| 13 | ಶ್ರೀ. ವಿ. ಮೋಹನ | ಶೀಘ್ರಲಿಪಿಗಾರ | 0831– 2470257 |
| 14 | ಶ್ರೀ. ಎಂ. ಎಂ. ರಜಪೂತ | ದ್ವಿ. ದ. ಸ. | 0831– 2470257 |
| 15 | ಶ್ರೀ. ಸಿ. ಸಿ. ದಂಡಗಲ | ದ್ವಿ. ದ. ಸ. | 0831– 2470257 |
| 16 | ಶ್ರೀ. ಎಚ್. ಬಿ. ಹುಬಳಿ | ರೇಖಾಗಾರ | 0831– 2470257 |
| 17 | ಶ್ರೀ. ಐ. ಎಸ್. ತರಬರ | ಬೆರಳಚ್ಚುಗಾರ | 0831– 2470257 |
| 18 | ಶ್ರೀಮತಿ. ಎಸ್. ವ್ಹಿ. ಕುಲಕರ್ಣಿ | ಬೆರಳಚ್ಚುಗಾರ್ತಿ | 0831– 2470257 |

## ಅನುಸೂಚಿ–2

## ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಪಡೆಯುವ ತಿಂಗಳ ವೇತನ.

| ಕ್ರ. ಸಂ. | ಅಧಿಕಾರಿ/ಸಿಬ್ಬಂದಿಗಳ ಹೆಸರು | ಹುದ್ದೆ | ಪಡೆಯುತ್ತಿರುವ ವೇತನ ರೂ. |
|---|---|---|---|
| 1 | 2 | 3 | 4 |
| 1 | ಶ್ರೀ. ವಿ. ಎಸ್. ಚೌಗುಲಾ | ಆಯುಕ್ತರು | 33,888/– |
| 2 | ಶ್ರೀ. ಎ. ಎಸ್. ಕಾಂಬಳೆ | ನಗರ ಯೋಜಕ ಸದಸ್ಯರು(ಪ್ರಭಾರ) | –– |
| 3 | ಶ್ರೀ ಐ.ಎಂ. ಶೇಡಬಾಳ್ಕರ | ಕಾರ್ಯಕಾರಿ ಅಭಿಯಂತರು | 36,497/– |
| 4 | ಶ್ರೀ ಜೆ. ಎಂ. ದೇಶಪಾಂಡೆ | ಸಹಾಯಕ ಕಾರ್ಯಕಾರಿ ಅಭಿಯಂತರು | 20,046/– |
| 5 | ಶ್ರೀ ಐ. ಸಿ. ಕಂಠಿ | ಕಚೇರಿ ವ್ಯವಸ್ಥಾಪಕ | 20,046/– |
| 6 | ಶ್ರೀ. ಎಸ್.ಕೆ. ಲೋಕರೆ | ಉಪ ತಹಶೀಲದಾರ | 21,309/– |
| 7 | ಶ್ರೀ. ಡಿ. ವೈ. ತಳವಾರ | ಲೆಕ್ಕ ಅಧೀಕ್ಷಕ | 18,062/– |
| 8 | – ಖಾಲಿ – | ಸಹಾಯಕ ಅಭಿಯಂತರು | –– |
| 9 | ಶ್ರೀ. ಟಿ.ಎಚ್. ದೇವರಮನಿ | ಪ್ರ.ದ.ಸ. | 17,140/– |
| 10 | ಶ್ರೀ. ಜಿ. ಐ. ಮುಜಾವರ | ಪ್ರ.ದ.ಸ. | 17,565/– |
| 11 | ಶ್ರೀ. ಎಸ್. ಎಸ್. ಕಣಬರ್ಗಿ | ಪ್ರ.ದ.ಸ. | 16,715/– |
| 12 | ಶ್ರೀ. ಎನ್. ಐ. ತಳವಾರ | ಪ್ರ.ದ.ಸ. | 11,754/– |
| 13 | ಶ್ರೀ. ವಿ. ಮೋಹನ | ಶೀಘ್ರಲಿಪಿಗಾರ | 14,910/– |
| 14 | ಶ್ರೀ. ಎಂ. ಎಂ. ರಜಪೂತ | ದ್ವಿ. ದ. ಸ. | 16,715/– |
| 15 | ಶ್ರೀ. ಸಿ. ಸಿ. ದಂಡಗಲ | ದ್ವಿ. ದ. ಸ. | 13,278/– |
| 16 | ಶ್ರೀ. ಎಚ್. ಬಿ. ಹುಬಳಿ | ರೇಖಾಗಾರ | 14,051/– |
| 17 | ಶ್ರೀ. ಐ. ಎಸ್. ತರಬರ | ಬೆರಳಚ್ಚುಗಾರ | 17,230/– |
| 18 | ಶ್ರೀಮತಿ. ಎಸ್. ವ್ಹಿ. ಕುಲಕರ್ಣಿ | ಬೆರಳಚ್ಚುಗಾರ್ತಿ | 14,750/– |

# ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ

## ಅನುಸೂಚಿ –3

## 2009–10 ನೇ ಸಾಲಿನ ಆಯವ್ಯಯ ಅಂದಾಜು ಪತ್ರಿಕೆ

## ಖರ್ಚಿನ ವಿವರ

| ಅ. ನಂ. | ಯೋಜನೆಯ ಹೆಸರು | 2008–09 ನೇ ಸಾಲಿನ ಆಯವ್ಯಯ ಅಂದಾಜು ಪತ್ರಿಕೆ ರೂ. ಲಕ್ಷಗಳಲ್ಲಿ | 2008–09 ನೇ ಸಾಲಿನ ಡಿಸೆಂಬರ್ 2008 ವರೆಗಿನ ಖರ್ಚು ರೂ. ಲಕ್ಷಗಳಲ್ಲಿ | 2009–10 ನೇ ಸಾಲಿನ ಆಯವ್ಯಯ ಅಂದಾಜು ಪತ್ರಿಕೆ ರೂ. ಲಕ್ಷಗಳಲ್ಲಿ | ಶರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ಯೋಜನೆ ಸಂಖ್ಯೆ. 6, 2ನೇ ಹಂತ,ರಾಣಿ ಚನ್ನಮ್ಮಾ ನಗರ | 21.00 | 21.90 | 8.50 | 8.50 ಭೂಸ್ವಾಧೀನ ವೆಚ್ಚ<br>– ಅಭಿವೃದ್ಧಿ ವೆಚ್ಚ |
| 2 | ಯೋಜನೆ ಸಂಖ್ಯೆ. 8, 2ನೇ ರೇಲ್ವೆ ಗೇಟ್ ಹತ್ತಿರ, ಟಿಳಕವಾಡಿ | 05.00 | – | 7.10 | 7.10 ಭೂಸ್ವಾಧೀನ ವೆಚ್ಚ<br>– ಅಭಿವೃದ್ಧಿ ವೆಚ್ಚ |
| 3 | ಯೋಜನೆ ಸಂಖ್ಯೆ. 13, ದೂರದರ್ಶನ ನಗರ. | 5.00 | – | 7.10 | 7.10 ಭೂಸ್ವಾಧೀನ ವೆಚ್ಚ<br>– ಅಭಿವೃದ್ಧಿ ವೆಚ್ಚ |
| 4 | ಯೋಜನೆ ಸಂಖ್ಯೆ.40ಎ, ಹಿಂಡಲಗಾ | – | – | –– | – ಭೂಸ್ವಾಧೀನ ವೆಚ್ಚ<br>– ಅಭಿವೃದ್ಧಿ ವೆಚ್ಚ |
| 5 | ಯೋಜನೆ ಸಂಖ್ಯೆ. 17, ವಡ್ಡರ ಭಾವಣಿ ಹತ್ತಿರ, ಅನಗೋಳ | – | 02.03 | –– | – ಭೂಸ್ವಾಧೀನ ವೆಚ್ಚ<br>– ಅಭಿವೃದ್ಧಿ ವೆಚ್ಚ |
| 6 | ಯೋಜನೆ ಸಂಖ್ಯೆ. 33, ಶಾಂತಿ ನಗರ, ಕಾಂಗ್ರೆಸ್ ಬಾವಿ ಹತ್ತಿರ ಟಿಳಕವಾಡಿ. | 20.00 | 07.14 | 14.20 | 14.20 ಭೂಸ್ವಾಧೀನ ವೆಚ್ಚ<br>– ಅಭಿವೃದ್ಧಿ ವೆಚ್ಚ |
| 7 | ಯೋಜನೆ ಸಂಖ್ಯೆ. 35,43,43ಎ, ರಾಮತೀರ್ಥ ನಗರ, ಕಣಬರ್ಗಿ | 350.00 | 64.69 | 412.00 | 212.00 ಭೂಸ್ವಾಧೀನ ವೆಚ್ಚ<br>200.00 ಅಭಿವೃದ್ಧಿ ವೆಚ್ಚ<br>412.00 |
| 8 | ಯೋಜನೆ ಸಂಖ್ಯೆ. 40, ಕುವೆಂಪು ನಗರ, ಹಿಂಡಲಗಾ | 55.00 | 43.97 | 160.00 | 110.00 ಭೂಸ್ವಾಧೀನ ವೆಚ್ಚ<br>50.00 ಅಭಿವೃದ್ಧಿ ವೆಚ್ಚ<br>160.00 |

| | | | | | |
|---|---|---|---|---|---|
| 9 | ಯೋಜನೆ ಸಂಖ್ಯೆ. 41, ಸ್ವಾತಂತ್ರ್ಯ ಯೋಧರ ಕಾಲನಿ, ಬೆನಕನಹಳ್ಳಿ | 20.00 | 06.72 | 20.00 | – ಭೂಸ್ವಾಧೀನ ವೆಚ್ಚ<br>20.00 ಅಭಿವೃದ್ಧಿ ವೆಚ್ಚ |
| 10 | ಯೋಜನೆ ಸಂಖ್ಯೆ. 47, ಸಹ್ಯಾದ್ರಿ ನಗರ, ಬಾಕ್ಸಾಯಿಟ್ ರಸ್ತೆ | 50.00 | 38.29 | 65.50 | 35.50 ಭೂಸ್ವಾಧೀನ ವೆಚ್ಚ<br>30.00 ಅಭಿವೃದ್ಧಿ ವೆಚ್ಚ<br>65.50 |
| 11 | ಯೋಜನೆ ಸಂಖ್ಯೆ. 51, ಲಕ್ಷ್ಮಿ ಟೇಕಡಿ | 50.00 | 07.96 | 12.85 | 02.85 ಭೂಸ್ವಾಧೀನ ವೆಚ್ಚ<br>10.00 ಅಭಿವೃದ್ಧಿ ವೆಚ್ಚ<br>12.85 |
| 12 | ಯೋಜನೆ ಸಂಖ್ಯೆ. 27, ಮಹಾದ್ವಾರ ರಸ್ತೆ | – | 18.98 | 5.00 | – ಭೂಸ್ವಾಧೀನ ವೆಚ್ಚ<br>5.00 ಅಭಿವೃದ್ಧಿ ವೆಚ್ಚ |
| 13 | ಯೋಜನೆ ಸಂಖ್ಯೆ. 57, ಬೆನಕನಹಳ್ಳಿ | 05.00 | – | 3.00 | – ಭೂಸ್ವಾಧೀನ ವೆಚ್ಚ<br>3.00 ಅಭಿವೃದ್ಧಿ ವೆಚ್ಚ |
| 14 | ಯೋಜನೆ ಸಂಖ್ಯೆ. 56, ಶ್ರೀ ಎಚ್. ಡಿ. ಕುಮಾರಸ್ವಾಮಿ ಬಡಾವಣೆ | 550.00 | 309.50 | 374.00 | 284.00 ಭೂಸ್ವಾಧೀನ ವೆಚ್ಚ<br>90.00 ಅಭಿವೃದ್ಧಿ ವೆಚ್ಚ<br>374.00 |

## ಹೊಸ ಯೋಜನೆಗಳು

| | | | | | |
|---|---|---|---|---|---|
| 15 | ಯೋಜನೆ ಸಂಖ್ಯೆ. 60, ಕಪಿಲೇಶ್ವರ | 25.00 | – | 20.00 | 14.00 ಭೂಸ್ವಾಧೀನ ವೆಚ್ಚ<br>6.00 ಅಭಿವೃದ್ಧಿ ವೆಚ್ಚ<br>20.00 |
| 16 | ಯೋಜನೆ ಸಂಖ್ಯೆ. 58, ಹಿಂಡಲಗಾ | 20.00 | – | 20.00 | 14.00 ಭೂಸ್ವಾಧೀನ ವೆಚ್ಚ<br>6.00 ಅಭಿವೃದ್ಧಿ ವೆಚ್ಚ<br>20.00 |
| 17 | ಯೋಜನೆ ಸಂಖ್ಯೆ. 59, ಹಿಂಡಲಗಾ 2ನೇ ಹಂತ. | 170.00 | – | 200.00 | 125.00 ಭೂಸ್ವಾಧೀನ ವೆಚ್ಚ<br>75.00 ಅಭಿವೃದ್ಧಿ ವೆಚ್ಚ<br>200.00 |
| 18 | ಯೋಜನೆ ಸಂಖ್ಯೆ. 61, ಕಣಬರ್ಗಿ 2ನೇ ಹಂತ | 220.00 | – | 250.00 | 125.00 ಭೂಸ್ವಾಧೀನ ವೆಚ್ಚ<br>125.00 ಅಭಿವೃದ್ಧಿ ವೆಚ್ಚ<br>250.00 |
| 19 | ಯೋಜನೆ ಸಂಖ್ಯೆ. 62, ಅನಗೋಳ | 150.00 | – | 200.00 | 125.00 ಭೂಸ್ವಾಧೀನ ವೆಚ್ಚ<br>75.00 ಅಭಿವೃದ್ಧಿ ವೆಚ್ಚ<br>200.00 |
| | ಒಟ್ಟು ರೂ. | 1716.00 | 521.18 | 1779.25 | |

# ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ

## ಅಶೋಕ ನಗರ, ಬೆಳಗಾವಿ–590016

## ಅನುಸೂಚಿ 4:

ಮಾಹಿತಿ ಹಕ್ಕು ಕಾಯ್ದೆ 2005 ರ ಅಡಿಯಲ್ಲಿ ಈ ಕಚೇರಿಯಿಂದ ನೀವು ಮಾಹಿತಿ/ದಾಖಲಾತಿಗಳನ್ನು ಪಡೆಯಬಹುದು.

| ಮೇಲ್ಮನವಿ ಪ್ರಾಧಿಕಾರ ಹೆಸರು/ಪದನಾಮ/ದೂರವಾಣಿ ಸಂಖ್ಯೆ | ಸಾರ್ವಜನಿಕ ಮಾಹಿತಿ ಅಧಿಕಾರಿ ಹೆಸರು/ಪದನಾಮ/ದೂರವಾಣಿ ಸಂಖ್ಯೆ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹೆಸರು/ಪದನಾಮ/ದೂರವಾಣಿ ಸಂಖ್ಯೆ |
|---|---|---|
| ಡಾ. ವ್ಹಿ.ಎಸ್. ಚೌಗುಲಾ<br>ಕೆ.ಎ.ಎಸ್,<br>ಆಯುಕ್ತರು,<br>ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,<br>ಬೆಳಗಾವಿ.<br>ದೂರವಾಣಿ : 0831–2470342 | 1) ಶ್ರೀ ಎ.ಎಸ್. ಕಾಂಬಳೆ,<br>ನಗರ ಯೋಜಕ ಸದಸ್ಯರು,(ಪ್ರಭಾರ)<br>ಯೋಜನಾ ಶಾಖೆ, ಹಂಚಿಕೆ ಹಾಗೂ ಆಡಳಿತ ಶಾಖೆ.<br>ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,<br>ಬೆಳಗಾವಿ.<br>ದೂರವಾಣಿ : 0831–2470257 | ಸಹಾಯಕ ಅಭಿಯಂತರು,<br>ಯೋಜನಾ ಶಾಖೆ,<br>ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,<br>ಬೆಳಗಾವಿ.<br>ದೂರವಾಣಿ : 0831–2470257 |
| | 2) ಶ್ರೀ ಐ.ಎಮ್. ಶೇಡಬಾಳಕರ,<br>ಕಾರ್ಯ ನಿರ್ವಾಹಕ ಅಭಿಯಂತರು,<br>ಲೋಕೋಪಯೋಗಿ ಶಾಖೆ,<br>ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,<br>ಬೆಳಗಾವಿ.<br>ದೂರವಾಣಿ : 0831–2473107 | ಸಹಾಯಕ ಅಭಿಯಂತರು,<br>ಲೋಕೋಪಯೋಗಿ ಶಾಖೆ,<br>ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,<br>ಬೆಳಗಾವಿ.<br>ದೂರವಾಣಿ : 0831–2470257 |
| | 3) ಉಪ ವಿಭಾಗಾಧಿಕಾರಿಗಳು,<br>ಬೆಳಗಾವಿ ಉಪ ವಿಭಾಗ, ಹೆಚ್ಚುವರಿ ಪ್ರಭಾರದಲ್ಲಿರುವ<br>ವಿಶೇಷ ಭೂಸ್ವಾಧೀನ ಅಧಿಕಾರಿ,<br>ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,<br>ಬೆಳಗಾವಿ.<br>ದೂರವಾಣಿ : 0831–2470257 | 4) ಶ್ರೀ ಜಿ. ಜಿ. ತಳವಾರ,<br>ಶಿರಸ್ತೇದಾರ,<br>ಭೂಸ್ವಾಧೀನ ಶಾಖೆ,<br>ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,<br>ಬೆಳಗಾವಿ.<br>ದೂರವಾಣಿ : 0831–2470257 |
| | | 5) ಶ್ರೀ ಐ.ಸಿ. ಕಂಠಿ,<br>ಕಚೇರಿ ಅಧೀಕ್ಷಕರು,<br>ಆಡಳಿತ ಮತ್ತು ಹಂಚಿಕೆ ಶಾಖೆ,<br>ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,<br>ಬೆಳಗಾವಿ.<br>ದೂರವಾಣಿ : 0831–2470257 |
| | | 6) ಶ್ರೀ ಡಿ.ವಾಯ್ ತಳವಾರ,<br>ಲೆಕ್ಕಾಧೀಕ್ಷಕರು,<br>ಲೆಕ್ಕ ಪತ್ರ ಶಾಖೆ,<br>ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,<br>ಬೆಳಗಾವಿ.<br>ದೂರವಾಣಿ : 0831–2470257 |